ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 466/2018 ಸಿಡಬ್ಲೂ : 4 ಪಿಡಬ್ಲೂಃ 02

ಪ್ರಮಾಣವಚನ ಬೋಧಿಸಲಾಯಿತು ದಿಃ 21-11-2024

ಹೆಸರು : ಮಲಕಪ್ಪ

ತಂದೆ ಹೆಸರು : ಶಿವಪ್ಪ

ವಯಸ್ಸು : 44 ವರ್ಷ

ಉದ್ಯೋಗ : ಮುಖ್ಯ ಪೇದೇ ಮಳಖೇಡ್ ಪೊಲೀಸ್ ಠಾಣೆ

ವಾಸಸ್ಥಳ : ಮಳಖೇಡ್

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು ಸನ್ 2013 ರಿಂದ ಸನ್ 2020 ವರೆಗೆಸೇಡಂ ಪೋಲೀಸ್ ಠಾಣೆಯಲ್ಲಿ ಪಿ ಸಿ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 24-03-2018 ರಂದು ಮಧ್ಯಾಹ್ನ 03-00 ಗಂಟೆಗೆ ಠಾಣೆಯಲ್ಲಿದ್ದಾಗ ನನಗೆ ಚಾ ಸಾ 1 ರವರು ತಿಳಿಸಿರುವುದೇನೆಂದರೆ ಸೇಡಂ ಪಟ್ಟಣದ ದೊಡ್ಡಗಸಿ ಹತ್ತಿರ ಅಕ್ರಮವಾಗಿ ಸೇಂದಿ ಮಾರಾಟ ಮಾಡುತ್ತಿದ್ದಾರೆ ಸದರಿ ಬಾತನಿ ಖಚಿತ ಬಾತನಿ ಇರುವುದರಿಂದ ದಾಳಿ ಮಾಡಲು ನಡೆಯಿರಿ ಎಂದಾಗ ನಾನು ಮತ್ತು ಚಾ ಸಾ 5 ರಿಂದ 6 ಹಾಗೂ ಇಬ್ಬರೂ ಪಂಚರಾದ ಚಾ ಸಾ 2 ಮತ್ತು 3 ರವರು ಕೂಡಿಕೊಂಡು ಒಂದು ಖಾಸಗಿ ವಾಹನದ ಮೂಲಕ ಡಿ ವೈಎಸ್ ಪಿ ಚಿಂಚೋಳ್ಳಿ ಹಾಗೂ ಸಿ ಪಿ ಐ ಸೇಡಂ ರವರ ಮಾರ್ಗದರ್ಶನದಲ್ಲಿ ಅಕ್ರಮವಾಗಿ ಸೇಂದಿ ಮಾರಾಟ ಮಾಡುವ ಸ್ಥಳಕ್ಕೆ ಹೋಗಿ ಒಂದು ಮನೆಯ ಹತ್ತಿರ ಮರೆಯಲ್ಲಿ ನಿಂತು ನೋಡಲಾಗಿ ಅಲ್ಲಿ ಕೇವೊಂದು ಜನರು ಹೋಗಿ ಬರುವುದನ್ನು ಖಚಿತ ಪಡಿಸಿಕೊಂಡು ಒಮ್ಮೆಲೆ ದಾಳಿ ಮಾಡಿ ಹಿಡಿಯಲಾಗಿ ವಿಚಾರಿಸಿದಾಗ ಸದರಿ ವ್ಯಕ್ತಿಯು ತನ್ನ ಹೆಸರು ಮಲ್ಲಪ್ಪ ತಂದೆ ಶರಣಪ್ಪ ಹಾಗೂ ಅರ್ಜುನ್ ತಂದೆ ಶರಣಪ್ಪ ಎಂದು ತಿಳಿಸಿರುತ್ತಾರೆ. ನಂತರ ಅವರ ಹತ್ತಿರ ಪರಿಶೀಲನೆ ಮಾಡಲಾಗಿ 30 ಸೇಂದಿ ಪ್ಯಾಕೇಟ್ ಗಳು ಇದ್ದವು. ಆರೋಪಿತರು ತನ್ನ ವ್ಯಯಕ್ತಿ ಲಾಭಕ್ಕಾಗಿ ಸರ್ಕಾರಿದಿಂದ ಯಾವುದೇ ಪರವಾನಗಿ ಇಲ್ಲದೇ ಮದ್ಯ ಮಾರಾಟ ಮಾಡಲು ಒಪ್ಪಿ ಕೊಂಡಿರುತ್ತಾರೆ. ನಂತರ ಒಂದು ಸೇಂದಿ ಪ್ಯಾಕೇಟನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಳ್ಳಲಾಯಿತು. ಇನ್ನುಳಿದ 29 ಸೇಂದಿ ಪ್ಯಾಕೇಟ್ ಗಳು ಹಾಗೂ ಆರೋಪಿಯೋಂದಿಗೆ ಮರಳಿ ಠಾಣೆಗೆ ಬಂದು ಚಾ ಸಾ 8 ರವರಿಗೆ ಒಪ್ಪಿ ಸಿರುತ್ತೇವೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಬಿ ಎಸ್ ಪಿ  ವಕೀಲರಿಂದಃ

ಚೌ ರಸ್ತೆಯಿಂದ ದೊಡ್ಡಗಸಿ ತನಕ ಇರುವ ಏರೀಯಾಗೆ ದೊಡ್ಡಗಸಿ ಅಂತಾ ಕರೆಯುತ್ತಾರೆ ಎಂದರೆ ಸರಿ. ಸಾಕ್ಷಿಯು ಅದೇ ಏರಿಯಾದಲ್ಲಿ ಆರೋಪಿತರು ಸೇಂದಿ ಮಾರಾಟ ಮಾಡುತ್ತಿದ್ದರು ಎಂದು ತಿಳಿಸುತ್ತಾರೆ. ಸದರಿ ಬಡಾವಣೆಯಲ್ಲಿ 1800ಜನರು ವಾಸಿಸುತ್ತಿದ್ದಾರೆ ಎಂದರೆ ಇರಬಹುದು. ನಾವು ನಮ್ಮ ವರದಿಯಲ್ಲಿ ಯಾವ ಮನೆಯ ಹತ್ತಿರ ನಿಂತುಕೊಂಡು ನೋಡಿದೆವು ಎಂಬುದರ ಬಗ್ಗೆ ನಮೂದಿಸಿಲ್ಲ ಎಂದರೆ ಸರಿಯಿಲ್ಲ. ಘಟನಾ ನಡೆದ ಸ್ಥಳದಲ್ಲಿ ಎಷ್ಟು ಜನರು ಸೇರಿದ್ದರು ಎಂದು ನನಗೆ ಹೇಳಲು ಬುರುವುದಿಲ್ಲ. ಅದೇ ರೀತಿ ಅಕ್ರಮ ವಾಗಿ ಸೇಂದಿ ಯಾರು ಯಾರಿಗೆ ಮಾರಾಟ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಜನರಿಗೆ ಮಾರಾಟ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ ಎಷ್ಟು ಕೋಣೆಗಳು ಇದ್ದವು ಎಂದು ನನ್ನ ವರದಿಯಲ್ಲಿ ಬರೆದಿಲ್ಲ. ಸದರಿ ಮನೆಯು ಯಾರಿಗೆ ಸಂಬಂದಿಸಿದೆ ಎಂಬುದರ ಬಗ್ಗೆ ಬರೆದಿಲ್ಲ ಹಾಗೂ ವಿಚಾರಣೆ ಮಾಡಿಲ್ಲ. ಆರೋಪಿತರು ಸೇಡಂ ಪಟ್ಟಣದ ನಿವಾಸಿ ಅಲ್ಲ ಸದರಿಯವರು ಹೊಸಳ್ಳಿ ಮತ್ತು ಕೊಂಕನಳ್ಳಿ ಗ್ರಾಮದವರು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯತ್ತಾರೆ. ಇಬ್ಬರು ಆರೋಪಿಯಲ್ಲಿ ನಾನು ಯಾವ ಆರೋಪಿಯಿಂದ ಸೇಂದಿ ಪ್ಯಾಕೇಟನ್ನು ಜಪ್ತು ಪಡಿಸಿಕೊಂಡಿದ್ದೇನೆ ಎಂದು ಹೇಳಲು ಆಗುವುದಿಲ್ಲ.

ದಿಃ 24-03-2018 ರಂದು ಮಧ್ಯಾಹ್ನ 03-00 ಗಂಟೆಗೆ ಠಾಣೆಯಲ್ಲಿದ್ದಾಗ ನನಗೆ ಚಾ ಸಾ 1 ರವರು ತಿಳಿಸಿರುವುದೇನೆಂದರೆ ಸೇಡಂ ಪಟ್ಟಣದ ದೊಡ್ಡಗಸಿ ಹತ್ತಿರ ಅಕ್ರಮವಾಗಿ ಸೇಂದಿ ಮಾರಾಟ ಮಾಡುತ್ತಿದ್ದಾರೆ ಸದರಿ ಬಾತನಿ ಖಚಿತ ಬಾತನಿ ಇರುವುದರಿಂದ ದಾಳಿ ಮಾಡಲು ನಡೆಯಿರಿ ಎಂದಾಗ ನಾನು ಮತ್ತು ಚಾ ಸಾ 5 ರಿಂದ 6 ಹಾಗೂ ಇಬ್ಬರೂ ಪಂಚರಾದ ಚಾ ಸಾ  2 ಮತ್ತು 3  ರವರು ಕೂಡಿಕೊಂಡು ಒಂದು ಖಾಸಗಿ ವಾಹನದ ಮೂಲಕ ಡಿ ವೈಎಸ್ ಪಿ ಚಿಂಚೋಳ್ಳಿ ಹಾಗೂ ಸಿ ಪಿ ಐ ಸೇಡಂ ರವರ ಮಾರ್ಗದರ್ಶನದಲ್ಲಿ ಅಕ್ರಮವಾಗಿ ಸೇಂದಿ ಮಾರಾಟ ಮಾಡುವ ಸ್ಥಳಕ್ಕೆ ಹೋಗಿ ಒಂದು ಮನೆಯ ಹತ್ತಿರ ಮರೆಯಲ್ಲಿ ನಿಂತು ನೋಡಲಾಗಿ ಅಲ್ಲಿ ಕೇವೊಂದು ಜನರು ಹೋಗಿ ಬರುವುದನ್ನು ಖಚಿತ ಪಡಿಸಿಕೊಂಡು ಒಮ್ಮೆಲೆ ದಾಳಿ ಮಾಡಿ ಹಿಡಿಯಲಾಗಿ ವಿಚಾರಿಸಿದಾಗ ಸದರಿ ವ್ಯಕ್ತಿಯು ತನ್ನ ಹೆಸರು ಮಲ್ಲಪ್ಪ ತಂದೆ ಶರಣಪ್ಪ ಹಾಗೂ ಅರ್ಜುನ್ ತಂದೆ ಶರಣಪ್ಪ ಎಂದು ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.  ನಂತರ ಅವರ ಹತ್ತಿರ ಪರಿಶೀಲನೆ ಮಾಡಲಾಗಿ 30 ಸೇಂದಿ ಪ್ಯಾಕೇಟ್ ಗಳು ಇದ್ದವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.   ಆರೋಪಿತರು ತನ್ನ ವ್ಯಯಕ್ತಿ ಲಾಭಕ್ಕಾಗಿ ಸರ್ಕಾರಿದಿಂದ ಯಾವುದೇ ಪರವಾನಗಿ ಇಲ್ಲದೇ ಮಧ್ಯ ಮಾರಾಟ ಮಾಡಲು ಒಪ್ಪಿ ಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.  ನಂತರ ಒಂದು ಸೇಂದಿ ಪ್ಯಾಕೇಟನ್ನು ರಾಸಾಯನಿಕ ಪರೀಕ್ಷೆಗಾಗಿ

ತೆಗೆದುಕೊಳ್ಳಲಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಇನ್ನುಳಿದ 29 ಸೇಂದಿ ಪ್ಯಾಕೇಟ್ ಗಳು ಹಾಗೂ ಆರೋಪಿಯೋಂದಿಗೆ ಮರಳಿ ಠಾಣೆಗೆ ಬಂದು ಚಾ ಸಾ 8 ರವರಿಗೆ ಒಪ್ಪಿಸಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಮೇಲಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**